**ಓ ಎಸ್ ನಂಃ 31/2015**

**ಡಿ. ಡಬ್ಲ್ಯೂ ಃ 1**

**ದಿಃ 19.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ವಾದಿ ಪರ ಶ್ರೀ ವಿ ವಿ ಆರ್ ವಕೀಲರಿಂದ ಃ**

ದಾವಾ ಸ್ವತ್ತುಗಳು ರಾಮಯ್ಯ ಮತ್ತು ಅವರ ಕುಟುಂಬದ ಒಟ್ಟು ಕುಟುಂಬದ ಸ್ವತ್ತುಗಳೆಂದರೆ ಸರಿ. ರಾಮಯ್ಯ ನವರ ಜೀವಿತ ಕಾಲದಲ್ಲಿ ಎಲ್ಲ ದಾವಾ ಸ್ವತ್ತುಗಳನ್ನು ಅವರ ಉಸ್ತುವಾರಿಯಲ್ಲಿ ನೋಡಿಕೊಳ್ಳುತ್ತಿದ್ದರು ಎಂದರೆ ಸುಳ್ಳು. ರಾಮಯ್ಯ ನವರಿಗೆ ಕೆಲವು ದಾವಾ ಸ್ವತ್ತುಗಳು ಪಿತ್ರಾರ್ಜಿತವಾಗಿ ಬಂದ ಸ್ವತ್ತುಗಳಾಗಿದ್ದವು ಎಂದರೆ ಸರಿ. ರಾಮಯ್ಯ ನವರಿಗೆ ಯಾವ ದಾವಾ ಸ್ವತ್ತುಗಳು ಪಿತ್ರಾರ್ಜಿತವಾಗಿ ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ.

ಸ.ನಂ. 18/1 ನ್ನು ನಮ್ಮ ಅಜ್ಜಿ ಖರೀದಿ ಮಾಡಿದ ಸ್ವತ್ತಾಗಿದೆ. ಸದರಿ ಜಮೀನನ್ನು ನನ್ನ ತಂದೆಯವರು ಹಣವನ್ನು ಕೊಟ್ಟು ನನ್ನ ಅಜ್ಜಿಯ ಹೆಸರಿನಲ್ಲಿ ಖರೀದಿ ಮಾಡಿದ್ದರು. ಮೂಲತಃ ಎಲ್ಲ ದಾವಾ ಸ್ವತ್ತುಗಳ ದಾಖಲಾತಿಗಳು ನನ್ನ ತಾತನವರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ಸರಿ. ಅದು 2001 ಕ್ಕಿಂತ ಮುಂಚೆ ನನ್ನ ತಾತನ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ಸ.ನಂ. 18/1 ನನ್ನ ಅಜ್ಜಿಯ ಹೆಸರಿನಲ್ಲೇ ಮುಂದುವರೆದಿರುತ್ತದೆ.

ದಾವಾ ಸ್ವತ್ತುಗಳು ದಿನಾಂಕ ಃ22.03.2002 ರಲ್ಲಿ ವಿಭಾಗವಾಗಿರುತ್ತದೆ. ವಿಭಾಗ ಪತ್ರದ ಪ್ರತಿ ನನ್ನ ಹತ್ತಿರ ಇರುತ್ತದೆ. ಅದರ ಅಸಲಿ ಪತ್ರ ನನ್ನ 2 ನೇ ಚಿಕ್ಕಪ್ಪನಾದ ಲಕ್ಷ್ಮಣಪ್ಪ ಅಂದರೆ ಪ್ರತಿವಾದಿ 3 ರವರ ಬಳಿ ಇರುತ್ತದೆ. ಭಾಗಪತ್ರದ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ಸದರಿ ವಿಭಾಗಕ್ಕೆ ನನ್ನ ತಂದೆ, ನನ್ನ ಚಿಕ್ಕಪ್ಪಂದಿರಾದ ಲಕ್ಷ್ಮಣಪ್ಪ ಮತ್ತು ಕೆಂಚರಾಮಯ್ಯನವರು ಪಕ್ಷಗಾರರು ಆಗಿರುತ್ತಾರೆ. ಸದರಿ ವಿಭಾಗಪತ್ರಕ್ಕೆ ನನ್ನ ತಂದೆ ಮತ್ತು ನನ್ನ ತಂದೆಯ ಇಬ್ಬರು ಸಹೋದರರು ಮಾತ್ರ ಪಕ್ಷಗಾರರಾಗಿದ್ದರು. ಸದರಿ ವಿಭಾಗಪತ್ರ ಪಂಚಾಯಿತಿ ಪಾಲು ಪಟ್ಟಿಯಾಗಿದ್ದು, ಅದನ್ನು ಸ್ಟ್ಯಾಂಪ್ ಪೇಪರ್ ಮೇಲೆ ಬರೆಯಲಾಗಿರುತ್ತದೆ. ಸದರಿ ವಿಭಾಗಪತ್ರದಲ್ಲಿ ವಾದಿ ಮತ್ತು 5 ನೆ ಪ್ರತಿವಾದಿಗೆ ಏನಾದರೂ ಭಾಗಾಂಶವನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ವಾದಿ ಮತ್ತು 5 ನೇ ಪ್ರತಿವಾದಿಯ ಹಿಸ್ಸೆಗೆ ಒಂದೊಂದು ಖಾಲಿ ನಿವೇಶನವನ್ನು ಭಾಗ ಕೊಟ್ಟ ಹಾಗೇ ತೋರಿಸಿರುತ್ತೇವೆ ಎಂದು ನುಡಿಯುತ್ತಾರೆ.

ವಾದಿ ಮತ್ತು 5 ನೇ ಪ್ರತಿವಾದಿ ಸದರಿ ಭಾಗಪತ್ರಕ್ಕೆ ಪಕ್ಷಗಾರರಾ ಎಂದರೆ ಸದರಿ ಪತ್ರವನ್ನು ನೋಡಿ ಹೇಳಬೇಕು ಎಂದು ಹೇಳುತ್ತಾರೆ. ಸದರಿ ಭಾಗಪತ್ರವನ್ನು ನಾನು ಓದಿರುತ್ತೇನೆ. ನನ್ನ ಪ್ರತಿವಾದಪತ್ರದಲ್ಲಿ ಭಾಗಪತ್ರದ ದಿನಾಂಕವನ್ನು ನಾನು ಹೇಳಿರಲಿಕ್ಕೆ ಇಲ್ಲ, ಆದರೆ ಎಂ ಆರ್ ನಂಬರ್ ನ್ನು ಹೇಳಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ವಿಭಾಗಪತ್ರದಲ್ಲಿ ಸ.ನಂ. 18/1 ನ್ನು ಸೇರಿಸಿರುವುದಿಲ್ಲ, ಅದಕ್ಕೆ ಕಾರಣ ಸದರಿ ಜಮೀನನ್ನು ವಿಭಾಗ ಆಗುವ ಮುಂಚೆಯೇ ನಮ್ಮ ಅತ್ತೆ ಮತ್ತು ಅಜ್ಜಿ ತಾತ ಸೇರಿ ಮಾರಾಟ ಮಾಡಿರುತ್ತಾರೆ. ಸದರಿ ಸ.ನಂ. 18/1 ನ್ನು ನಾಗೇಶ್ ಬಾಬು ರವರಿಗೆ 2001 ಅಥವಾ 2002 ರಲ್ಲಿ ಮಾರಾಟ ಮಾಡಲಾಗಿರುತ್ತದೆ. ನನ್ನ ಹತ್ತಿರ ಸ.ನಂ. 18/1 ರ ಕ್ರಯಪತ್ರ ಇರುವುದಿಲ್ಲ. ಸದರಿ ಕ್ರಯಪತ್ರದಲ್ಲಿ ಮಾರಾಟ ಮಾಡುವಾಗ ಯಾರು ಯಾರು ಪಕ್ಷಗಾರರು ಆಗಿದ್ದರು ಎಂದರೆ ಗೊತ್ತಿಲ್ಲ. ನಾನು ಸದರಿ ಕ್ರಯಪತ್ರವನ್ನು ನೋಡಿರುವ ಕಾರಣ ವಾದಿ ಮತ್ತು ನನ್ನ ಅಜ್ಜಿ ತಾತ ಮಾರಾಟ ಮಾಡಿರುತ್ತಾರೆ ಎಂದು ಈ ಹಿಂದೆ ಸಾಕ್ಷಿ ನುಡಿದಿರುತ್ತೇನೆ.

ನನ್ನ ತಂದೆ ಮತ್ತು ಅವರ ಸಹೋದರರು ಆ ಪತ್ರಕ್ಕೆ ಪಕ್ಷಗಾರರೋ ಇಲ್ಲವೋ ಎಂದು ಗೊತ್ತಿಲ್ಲ. ಸದರಿ ಸ್ವತ್ತನ್ನು ನನ್ನ ಅಜ್ಜಿ , ತಾತ ಮತ್ತು ನಮ್ಮ ಕುಟುಂಬದ ಎಲ್ಲ ಸದಸ್ಯರು ನಮ್ಮ ಕುಟುಂಬದ ಸಲುವಾಗಿ ಮಾರಾಟ ಮಾಡಿರುವ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆ ಸ್ವತ್ತು ಮಾರಿ ಎಷ್ಟು ಹಣ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆ ಕ್ರಯದ ಮೊಬಲಗನ್ನು ನಮ್ಮ ಅತ್ತೆ ಮತ್ತು ನನ್ನ ಅಜ್ಜಿ ಪಡೆದಿರುತ್ತಾರೆ. ಸದರಿ ಕ್ರಯಪತ್ರದಲ್ಲಿನನ್ನ ಅಜ್ಜಿ ಮತ್ತು ನನ್ನ ಅತ್ತೆಯಂದಿರು ಪಡೆದಿರುವ ಹಾಗೇ ನಮೂದು ಇರುತ್ತದೆ. ಸಾಕ್ಷಿಯು ಅದನ್ನು ಚೆಕ್ ಮೂಲಕ ನನ್ನ ಅಜ್ಜಿ ಮತ್ತು ಅತ್ತೆಯಂದಿರು ಪಡೆದಿರುತ್ತಾರೆ ಎಂದು ಹೇಳುತ್ತಾರೆ. ನನ್ನ ತಂದೆ ಮತ್ತು ಅತ್ತೆಯಂದಿರು ಆ ಪತ್ರಕ್ಕೆ ಸಹಿ ಮಾಡಿರುತ್ತಾರೆ. ಸದರಿ ಕ್ರಯಪತ್ರವನ್ನು ಮಾಡುವ ಸಮಯದಲ್ಲಿ ನಮ್ಮ ಕುಟುಂಬದ ನಿರ್ವಹಣೆಯನ್ನು ಯಾರು ಮಾಡುತ್ತಿದ್ದರು ಎಂದರೆ ಸಾಕ್ಷಿ ಆ ಸಮಯಕ್ಕೆ ನಮ್ಮ ಕುಟುಂಬದ ಸದಸ್ಯರು ಬೇರೆ ಬೇರೆಯಾಗಿದ್ದರು ಎಂದು ನುಡಿಯುತ್ತಾರೆ.

ನನ್ನ ಪ್ರಕಾರ ಸ.ನಂ. 18/1 ಮಾರಾಟ ಆಗಿರುವ ಕಾರಣಕ್ಕೆ ವಿಭಾಗದಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸದರಿ ವಿಭಾಗಪತ್ರದಲ್ಲಿ ಸ.ನಂ. 18/1 ರಲ್ಲಿ ಮಾರಾಟ ಮಾಡಿದ ಹಣ ನನ್ನ ಅತ್ತೆಯಂದಿರಿಗೆ ಕೊಟ್ಟಿದ್ದು ಅದು ಭಾಗದ ಪ್ರತಿಯಾಗಿ ಕೊಟ್ಟಿರುವುದಾಗಿ ಹೇಳಿರುವುದಿಲ್ಲ. ಆ ವಿಭಾಗದಲ್ಲಿ ನನ್ನ ಅಜ್ಜಿಯ ಹೆಸರಿಗೆ ಯಾವುದೇ ಭಾಗ ತೋರಿಸಿಲ್ಲ. ಸದರಿ ವಿಭಾಗ ಪತ್ರದಲ್ಲಿ ನನ್ನ ತಾತನ ಹೆಸರಿಗೆ ಯಾವುದೇ ಭಾಗವನ್ನು ಕೊಟ್ಟಿರುವುದಿಲ್ಲ, ಆದರೆ ಆ ಸಮಯದಲ್ಲಿ ನನ್ನ ತಾತನ ಹೆಸರಿನಲ್ಲಿ ಅವರ ಜೀವನಾಂಶಕ್ಕೆ ಹಣವನ್ನು ಅವರ ಬ್ಯಾಂಕ್ ಖಾತೆಯಲ್ಲಿರಿಸಲಾಗಿತ್ತು. ನಮ್ಮ ತಾತನ ಹೆಸರಿನಲ್ಲಿ ಬ್ಯಾಂಕ್ ಖಾತೆಯಲ್ಲಿ ಹಣವನ್ನು ನನ್ನ ತಂದೆ ಇಟ್ಟಿರುತ್ತಾರೆ.

ನನ್ನ ತಂದೆಯವರು ಸರ್ವೆ ಇಲಾಖೆಯಲ್ಲಿ ನೌಕರರಾಗಿ ಇದ್ದರು. ನಮ್ಮ ತಂದೆಯವರಿಗೆ ನಾವು 3 ಜನ ಮಕ್ಕಳಿರುತ್ತೇವೆ. ನಾವು ನೆಲಮಂಗಲದ ಬಿನ್ನಮಂಗಲದಲ್ಲಿ ನನ್ನ ತಾಯಿಯ ತಂದೆ ನೀಡಿರುವ ಸ್ವತ್ತಿನಲ್ಲಿ ವಾಸವಾಗಿರುತ್ತೇವೆ.

ನಮ್ಮ ತಂದೆ ನಮ್ಮ 3 ಜನ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ನೀಡಿರುತ್ತಾರೆ ಎಂದರೆ ಸರಿ. ನಮ್ಮ ತಂದೆ ಅವರ ಸಂಬಳದಲ್ಲಿ ನಮ್ಮ ಕುಟುಂಬದ ಪೋಷಣೆ ಮತ್ತು ನಮ್ಮಗಳ ವಿದ್ಯಾಭ್ಯಾಸವನ್ನು ಮಾಡಿಸುತ್ತಿದ್ದರು ಎಂದರೆ ಸಾಕ್ಷಿ ಅವರು ಸ್ವಲ್ಪ ಪ್ರಮಾಣದಲ್ಲಿ ಅಂದರೆ 1/3 ಅವರ ಸಂಬಳದ ಆದಾಯವನ್ನು ಖರ್ಚು ವೆಚ್ಚಗಳಿಗೆ ನೀಡುತ್ತಿದ್ದರು ಎಂದು ಹೇಳಿ ನಮ್ಮ ತಾಯಿಯ ಕಡೆಯಿಂದ ಆದಾಯ ಬರುತ್ತಿತ್ತು ಎಂದು ನುಡಿಯುತ್ತಾರೆ. ನಮ್ಮ ತಾಯಿಗೆ ಅವರ ತಂದೆ ನೀಡಿರುವ ಸ್ವತ್ತಿನ ಜೊತೆಗೆ ವಾಣಿಜ್ಯ ಮಳಿಗೆಯಿಂದ ಬಾಡಿಗೆ ಬರುತ್ತಿತ್ತು. ನನ್ನ ತಾಯಿಗೆ ಆದಾಯ ಮತ್ತು ಬಾಡಿಗೆ ಬರುತ್ತಿದ್ದ ಬಗ್ಗೆ ನನ್ನ ಹತ್ತಿರ ಯಾವುದೇ ದಾಖಲಾತಿಗಳು ಇರುವುದಿಲ್ಲ. ಸದರಿ ಆದಾಯ ನಗದಿನ ಮೂಲಕ ಬರುತ್ತಿತ್ತು. ನನ್ನ ತಂದೆಗೆ ಬರುತ್ತಿದ್ದ ಸಂಬಳದಲ್ಲಿ ಅವರು ನಮ್ಮ ಹಳ್ಳಿಯಲ್ಲಿ ನಮ್ಮ ಚಿಕ್ಕಪ್ಪಂದಿರಿಗೆ ಹಣವನ್ನು ನೀಡಿ ಮತ್ತು ನಮ್ಮ ಅತ್ತೆಯಂದಿರ ಮದುವೆ ಖರ್ಚನ್ನು ನಿಭಾಯಿಸಿರುತ್ತಾರೆ. ನಮ್ಮ ತಾತನಿಗೆ ಬರುತ್ತಿದ್ದ ಆದಾಯದಲ್ಲಿ ಅವರು ಪೋಷಣೆ ಮಾಡಲು ತುಂಬಾ ಜನ ಇದ್ದ ಕಾರಣ ಆಗುತ್ತಿರಲಿಲ್ಲ. ನನ್ನ ತಂದೆಯ ವಿದ್ಯಾಭ್ಯಾಸವನ್ನು ನನ್ನ ತಾತ ಅವರ ಆದಾಯದಿಂದ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆ ಮಠದಲ್ಲಿ ವಿದ್ಯಾಭ್ಯಾಸವನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಅವರ ಕುಟುಂಬದ ಮೇಲೆ ಖರ್ಚು ವೆಚ್ಚವನ್ನು ಮಾಡಿರುವುದಕ್ಕೆ ನನ್ನ ಹತ್ತಿರ ಯಾವುದೆ ದಾಖಲಾತಿಗಳು ಇರುವುದಿಲ್ಲ. ನನ್ನ ತಂದೆಯವರು ರಾಮಯ್ಯ ನವರ ಮಕ್ಕಳಿಗೆ ಅವರ ಸಂಬಳವನ್ನು ಉಪಯೋಗಿಸಿರುವುದಿಲ್ಲ ಎಂದರೆ ಉಪಯೋಗಿಸಿರುತ್ತಾರೆ. ನನ್ನ ತಂದೆ ನೇರವಾಗಿ ನನ್ನ ಅತ್ತೆಯಂದಿರ ಮದುವೆ ಮಾಡಿದ ಕಾರಣ ನನ್ನ ಹತ್ತಿರ ಅವರು ಮದುವೆಯ ಖರ್ಚಿಗೆ ಖರ್ಚು ಮಾಡಿರುವ ದಾಖಲಾತಿಗಳು ಇರುವುದಿಲ್ಲ.

ನಮ್ಮ ತಾತ ರೂ. ಒಂದೂವರೆ ಲಕ್ಷ ಹಣವನ್ನು ಸಾಲ ಮಾಡಿರುತ್ತಾರೆ ಎಂದು ನಾನು ಪ್ರಾಸಾ 1 ರವರಿಗೆ ಹೇಳಿದ್ದು ಸದರಿ ಹಣವನ್ನು ವಾದಿಯ ಮದುವೆಯ ಸಮಯದಲ್ಲಿ ಮಾಡಲಾಗಿರುತ್ತದೆ. ರಾಮಯ್ಯ ನವರ ಜೀವಿತ ಕಾಲದಲ್ಲಿ ರಾಮಯ್ಯ ನವರೇ ಅವರ ಕುಟುಂಬದ ನಿರ್ವಹಣೆ ಮತ್ತು ವ್ಯವಹಾರಗಳನ್ನು ಮಾಡುತ್ತಿದ್ದರು, ನನ್ನ ತಂದೆಯವರು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ತಾತನ ಬ್ಯಾಂಕ್ ಖಾತೆಯಲ್ಲಿ ವಿಭಾಗ ಆಗುವ ಸಮಯದಲ್ಲಿ ನನ್ನ ತಂದೆಯವರು ಎಷ್ಟು ಹಣವನ್ನು ಇಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯವರು ವಿಭಾಗದ ಸಮಯದಲ್ಲಿ ಚೀಟಿಯನ್ನು ತೆಗೆದು ನನ್ನ ತಾತನ ಖಾತೆಗೆ ಜಮಾ ಮಾಡಿದ್ದರು. ಸದರಿ ಹಣ ಎಷ್ಟು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಅವರ ಸಹೋದರ ಸಹೋದರಿಯವರ ಜೊತೆ ಅನ್ಯೋನ್ಯವಾಗಿದ್ದರು ಎಂದರೆ ಸರಿ. ವಾದಿ ಮತ್ತು ಪ್ರತಿವಾದಿ ನನ್ನ ತಂದೆ ಚೆನ್ನಾಗಿದ್ದ ಕಾರಣ ಈ ದಾವೆಯನ್ನು ಹೂಡುವ ಸಮಯಕ್ಕಿಂತ ಮುಂಚೆ ಭಾಗ ಕೊಡಿ ಎಂದು ಕೇಳಿರಲಿಲ್ಲ ಎಂದರೆ ಸಾಕ್ಷಿ ಅವರಿಗೆ ಭಾಗ ನೀಡಲಾಗಿರುತ್ತದೆ ಎಂದು ನುಡಿಯುತ್ತಾರೆ.

1 ನೆ ವಾದಿ ಮತ್ತು 5 ನೆ ಪ್ರತಿವಾದಿಗೆ ನಮ್ಮ ಕುಟುಂಬದಿಂದ ಸ.ನಂ. 18/1 ನ್ನು ಮಾರಿ ಬಂದ ಹಣವನ್ನು ಭಾಗವಾಗಿ ನೀಡಲಾಗಿರುವುದಿಲ್ಲ ಎಂದರೆ ಸುಳ್ಳು, ಸ.ನಂ. 18/1 ನನ್ನ ಅಜ್ಜಿಯ ಸಂಪೂರ್ಣ ಮಾಲೀಕತ್ವಕ್ಕೆ ಸೇರಿದ ಸ್ವತ್ತಾಗಿತ್ತು ಎಂದರೆ ಸುಳ್ಳು. ಸ.ನಂ. 18/1 ನ್ನು ನಮ್ಮ ಎಲ್ಲ ಕುಟುಂಬದವರು ಸೇರಿ ನಮ್ಮ ಅಜ್ಜಿಯ ಒಪ್ಪಿಗೆಯ ಮೇರೆಗೆ ಕುಟುಂಬದ ಸಲುವಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ಕ್ರಯ ಮಾಡುವ ಸಮಯದಲ್ಲಿ ಹೆಣ್ಣು ಮಕ್ಕಳ ಸಹಿ ಬೇಕು ಎನ್ನುವ ಕಾರಣಕ್ಕೆ ವಾದಿ ಮತ್ತು ಪ್ರತಿವಾದಿ 5 ರವರು ಬಂದು ನಮ್ಮ ಜೊತೆ ಸಹಿ ಮಾಡಿರುತ್ತಾರೆ ಎಂದರೆ **ಸುಳ್ಳು.**

ಸದರಿ ವಿಭಾಗಪತ್ರದಲ್ಲಿ ಎ ಷೆಡ್ಯೂಲ್ ಸ್ವತ್ತು ನಮ್ಮ ತಂದೆ ಮುನಿಯಪ್ಪ ನವರಿಗೆ ಬಂದಿದ್ದು, ಸದರಿ ಎ ಷೆಡ್ಯೂಲ್ ನಲ್ಲಿ ಸ.ನಂ. 17 ರಲ್ಲಿ 2 ಎಕರೆ ನಮ್ಮ ತಂದೆಗೆ ಬಂದಿದ್ದು 7 ಗುಂಟೆ ನಮ್ಮ ಚಿಕ್ಕಪ್ಪನವರಾದ ಕೆಂಚರಾಮಯ್ಯ ನವರಿಗೆ ನೀಡಲಾಗಿತ್ತು. ಸದರಿ ವಿಭಾಗವನ್ನು ನಮ್ಮ ತಂದೆ ಮುನಿಯಪ್ಪ, ನನ್ನ ಚಿಕ್ಕಪ್ಪಂದಿರರಾದ ಲಕ್ಷ್ಮಣಪ್ಪ ಮತ್ತು ಕೆಂಚರಾಮಯ್ಯ ನವರು ಹೊಂದಾಣಿಕೆಯಿಂದ ವಿಭಾಗ ಮಾಡಿಕೊಂಡಿದ್ದರು ಎಂದರೆ ನಮ್ಮಕುಟುಂಬದ ವಿಭಾಗವಾಗಿರುತ್ತದೆ ಎಂದು ನುಡಿಯುತ್ತಾರೆ. ವಿಭಾಗ ಆಗಿರುವ ವಿಚಾರವನ್ನು ನಾವು ಯಾವಾಗಲಾದರೂ ವಾದಿ ಮತ್ತು ಪ್ರತಿವಾದಿ 5 ರವರಿಗೆ ತಿಳಿಸಿರುತ್ತೀರಾ ಎಂದರೆ ಸಾಕ್ಷಿ ಈ ವಿಚಾರ ಅವರಿಗೆ ಗೊತ್ತಿರುತ್ತದೆ, ಅವರಿಗೆ ತಿಳಿಸುವುದು ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ವಾಸ್ತವವಾಗಿ ಎಂದೂ ವಿಭಾಗ ಮಾಡಿಕೊಂಡಿಲ್ಲ ಎಂದರೆ ವಿಭಾಗವಾಗಿರುತ್ತದೆ.

ನಿ ಡಿ 3 ರಿಂದ ನಿ ಡಿ 9 ವರೆಗಿನ ಕಂದಾಯ ದಾಖಲಾತಿಗಳನ್ನು ಸದರಿ ವಿಭಾಗಪತ್ರದ ಮೂಲಕ ನಾವು ಸೃಷ್ಟಿ ಮಾಡಿರುತ್ತೇವೆ ಎಂದರೆ ಸುಳ್ಳು. ರಾಮಯ್ಯ ನವರಿಗೆ ಓದು ಬರಹ ಬರುತ್ತಿರಲಿಲ್ಲ ಎಂದರೆ ರಾಮಯ್ಯ ನವರು ಓದುತ್ತಿದ್ದರು. ನನ್ನ ಅಜ್ಜಿಯವರಿಗೆ ಓದು ಬರಹ ಬರುತ್ತಿತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ವಿ ವಿ ಆರ್ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**